ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 1187/23**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 1

ದಿನಾಂಕಃ 02.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಸೌಮ್ಯ |
| ಗಂಡನ ಹೆಸರು | – ಹರೀಶ್ |
| ವಯಸ್ಸು | – 30 ವರ್ಷ |
| ವೃತ್ತಿ | – ಗೃಹಿಣಿ |
| ವಾಸಸ್ಥಳ | – ಮೈಸೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-2 ನನ್ನ ತಂದೆ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅಕ್ಕ. ಚಾಸಾ-5 ನನ್ನ ಬಾವ. ಚಾಸಾ-8 ರಿಂದ 18 ನನಗೆ ಗೊತ್ತು. 1ನೇ ಆರೋಪಿ ನನ್ನ ಗಂಡ. 2 ಆರೋಪಿ ನನ್ನ ಅತ್ತೆ. 3ನೇ ಆರೋಪಿ ನನ್ನ ಮಾವ. 4ನೇ ಆರೋಪಿ ನನ್ನ ಬಾವ, 5ನೇ ಆರೋಪಿ ನನ್ನ ಅತ್ತಿಗೆ. 6ನೇ ಆರೋಪಿ 5ನೇ ಆರೋಪಿಯ ಅಣ್ಣ. ನನ್ನ ಮದುವರೆ 1ನೇ ಆರೋಪಿಯ ಜೊತೆ ದಿಃ 17.05.2019 ರಂದು ಕುಶಾಲನಗರದ ಮಾರುತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ನಡೆದಿರುತ್ತದೆ. ಮದುವೆಯಾದ ಮೇಲೆ ನಾನು ಆರೋಪಿ 1 ರಿಂದ 3 ರವರ ಮನೆಯಲ್ಲಿ ವಾಸವಾಗಿದ್ದೆ. ನನ್ನ ವೈವಾಹಿಕ ಜೀವನದಲ್ಲಿ ನನ್ನ ಮತ್ತು ಆರೋಪಿತರ ನಡುವೆ ಸಣ್ಣ ಪುಟ್ಟ ವಿಚಾರವಾಗಿ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ನಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು 6 ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಇದರ ಹೊರತಾಗಿ ಆರೋಪಿತರು ಮತ್ತು ನನ್ನ ನಡುವೆ ಯಾವುದೇ ಗಲಾಟೆ ಆಗಿಲ್ಲ. ಆರೋಪಿತರು ನನಗೆ ಮಾನಸಿಕ ಮತ್ತು ದೈಹಿಂಕ ಹಿಂಸೆ ನೀಡಿಲ್ಲ, ವರದಕ್ಷಿಣೆ ಕಿರುಕುಳ ನೀಡಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ಧಗಳಿಂದ ನಿಂದಿಸಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ನಾನು

ಪೊಲೀಸರಿಗೆ ಆರೋಪಿತರ ವಿರುದ್ಧ ದೂರು ನೀಡಿಲ್ಲ ಹಾಗೂ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 02.03.2023ರ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 02.03.2023 ರಂದು ಆರೋಪಿತರಿಗೆ ಸೇರಿ ಮನೆಯಲ್ಲಿ ಮಾಡಿದ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 03.03.2023ರಂದು ಚಾಸಾ–1 ರವರು ವಾಸ ಇರುವ ಅವರ ತಂದೆ–ತಾಯಿ ಮನೆಯಲ್ಲಿ ಮಾಡಿದ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 03.03.2023ರಂದು ಚಾಸಾ–1 ರವರ ಕೆ ಆರ್ ನಗರದ ವಾಸದ ಮನೆಯಿಂದ ಸ್ವಲ್ಪ ದೂರದಲ್ಲಿರುವ ಆದಿಶಕ್ತಿ ತೋಪಮ್ಮ ದೇವಸ್ಥಾನದ ಪಕ್ಕ ಮಾಡಿದ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–5 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 11.04.2023ರಂದು ಕೊಡಗು ಮಹಿಳಾ ಪೊಲೀಸ್ ಠಾಣೆಯಲ್ಲಿ ಮಾಡಿದ ಅಮಾನತ್ತು ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–6 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ನಿಪಿ–1 ರಿಂದ 6 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ನನ್ನ ಮದುವೆಯ ಕಾಲದಲ್ಲಿ ಚಾಸಾ-2 ರವರು ನನಗೆ 200 ಗ್ರಾಂ ತೂಕದ ಬಂಗಾರಗಳನ್ನು ಕೊಟ್ಟಿರುತ್ತಾರೆ ಮತ್ತು 1ನೇ ಆರೋಪಿಯ ಒತ್ತಾಯದ ಮೇರೆಗೆ 14 ಗ್ರಾಂ ತೂಕದ ಚಿನ್ನದ ಚೈನ್, 7 ಗ್ರಾಂ ತೂಕದ ಚಿನ್ನದ ಉಂಗುರವನ್ನು 1ನೇ ಆರೋಪಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ಆರೋಪಿತರ ಮನೆಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಆರೋಪಿತರು ನನಗೆ ಮದುವೆ ಕಾಲದಲ್ಲಿ 1ನೇ ಆರೋಪಿಯ ಮನೆಯವರು ನೀಡಿದ್ದ ಒಡವೆಗಳನ್ನು ಉಪಾಯವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ನಿಶ್ಚಿತಾರ್ಥ ಸಂದರ್ಭದಲ್ಲಿ ನೀಡಿದ್ದ ಉಂಗುರವನ್ನು ಸಹ ನನ್ನಿಂದ ವಾಪಾಸ್ಸು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲಾ ಸೇರಿ ನನ್ನನ್ನು ಕುರಿತು ನೀನು ನಿನ್ನ ತಂದೆಯ ಮನೆಯಿಂದ ಏನೂ ವರದಕ್ಷಿಣೆ ತಂದಿಲ್ಲ, ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿ ಪ್ರತಿನಿತ್ಯ ನನಗೆ ಮತ್ತು ಚಾಸಾ-2 ಮತ್ತು 3 ರವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ವಿವಾಹಕ್ಕೂ ಮೊದಲು ಒಳ್ಳೆಯ ಉದ್ಯೋಗದಲ್ಲಿದ್ದು, 1ನೇ ಆರೋಪಿ ಮತ್ತು ಆತನ ಮನೆಯವರು ಸುಮಾರು 4-5 ಮದ್ಯದ ಬಾರ್ ಗಳನ್ನು ನಡೆಸುತ್ತಿದ್ದು, 20 ರಿಂದ 25 ಮನೆ ಬಾಡಿಗೆ ಬರುತ್ತಿದ್ದು, ಸ್ಥಿತಿವಂತರು ಎಂದು ತೋರಿಸಿ 1ನೇ ಆರೋಪಿಯು ನನ್ನ ಮದುವೆಯ ಸಮಯದಲ್ಲಿ ನೀನು ಕೆಲಸಕ್ಕೆ ಹೋಗುವುದು ಬೇಡ ಎಂದು ಹೇಳಿ ನನ್ನನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮದುವೆಯಾದ 9 ತಿಂಗಳು ಮಾತ್ರ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರ ಆರೋಪಿತರೆಲ್ಲಾ ಸೇರಿ ನನ್ನ ತವರು ಮನೆಯಿಂದ ವರದಕ್ಷಿಣೆ ತರುವಂತೆ ಒತ್ತಾಯಿಸಿ , ನಿನಗೆ ವರದಕ್ಷಿಣೆ ಕೊಡುವ ಶಕ್ತಿ ಇಲ ಎಂದರೆ ನೀನು ಕೆಲಸಕ್ಕೆ ಹೋಗಿ ಸಂಪಾದನೆ ಮಾಡಿಕೊಂಡು ಬಂದು ನನಗೆ ಕೊಡು ಎಂದು ನನ್ನನ್ನು ಬಲವಂತವಾಗಿ ಕೆಲಸಕ್ಕೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. 2 ರಿಂದ 6ನೇ ಆರೋಪಿತರು ಸೇರಿ ನಾನೇ ಹಠ ಮಾಡಿ ಕೆಲಸಕ್ಕೆ ಹೋಗುತ್ತಿರುವುದಾಗಿ ಇಲ್ಲಸಲ್ಲದ ಚಾಡಿ ಹೇಳಿ 1ನೇ ಆರೋಪಿಗೆ ನಂಬಿಸಿರುತ್ತಾರೆ ಎಂದರೆ

ಸರಿಯಲ್ಲ. ಇವರ ಮಾತು ಕೇಳಿ 1 ನೇ ಆರೋಪಿ ನನ್ನ ಜೊತೆ ಜಗಳ ತೆಗೆದು ನನಗೆ ಮಾನಸಿಕ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿ 1ನೇ ಆರೋಪಿ ನನಗೆ ಪ್ರಯಾಣದ ಖರ್ಚಿಗಾಗಿ ರೂ.500/- ಮಾತ್ರ ನೀಡಿ ನಂತರ ನನ್ನ ಆಧಾರ್ ಕಾರ್ಡ್ನ್ನು ಕೊಡುವಂತೆ ಕೇಳಿದ್ದು, ಅದನ್ನು ಕೊಡಲು ನಾನು ಸ್ವಲ್ಪ ತಡ ಮಾಡಿದಾಗ 1ನೇ ಆರೋಪಿಯು ನನಗೆ ಮತ್ತು ಚಾಸಾ-2 ಮತ್ತು 3 ರವರಿಗೆ "ಲೋಫರ್ ಮುಂಡೆ, ಸೂಳೆ ಮುಂಡೆ" ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಕೇಳಿದಷ್ಟು ವರದಕ್ಷಿಣೆ ತರದೆ ಇದ್ದ ಕಾರಣ 2ನೇ ಆರೋಪಿ ನನ್ನನ್ನು ನನ್ನ ತಾಯಿ ಮನೆಗೆ ವರದಕ್ಷಿಣೆ ತರಲು ಬಲವಂತವಾಗಿ ಕಳುಹಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮದುವೆಯ ವಾರ್ಷಿಕೋತ್ಸವದ ನೆಪ ಒಡ್ಡಿ , ನನ್ನ ತಂದೆ ತಾಯಿ ಮನೆಗೆ ಬಂದು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು 2ನೇ ಆರೋಪಿಯ ಹೆಸರಿನಲ್ಲಿದ್ದ ಇನ್ನೊಂದು ಮನೆಯಲ್ಲಿ ವಾಸವಾಗಿದ್ದು, ಅಲ್ಲಿ 1ನೇ ಆರೋಪಿಯು ತನ್ನ ಸ್ನೇಹಿತರ ಜೊತೆ ಪಾರ್ಟಿ ಮಾಡಿ, ಅತೀಯಾಗಿ ಮಧ್ಯಪಾನ ಮಾಡಿ ನನ್ನನ್ನು ಬಲವಂತವಾಗಿ 2ನೇ ಆರೋಪಿಯ ಮನೆಯಿಂದ ತಾನಿದ್ದ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ 1ನೇ ಆರೋಪಿಯು ಇಡೀ ಮನೆಯನ್ನು ಗಲೀಜು ಮಾಡಿ ಆತನ ಸ್ನೇಹಿತರ ಒಳ ಉಡುಪುಗಳನ್ನು ಒಗೆಯಬೇಕು ಮತ್ತು ಮನೆಯನ್ನು ಸ್ವಚ್ಚಗೊಳಿಸಬೇಕು ಎಂದು ನನಗೆ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಕೆಲಸ ಮಾಡಲು ನನ್ನಿಂದ ಸಾಧ್ಯವಿಲ್ಲ ಎಂದು ಹೇಳಿದಾಗ ನನಗೆ 1ನೇ ಆರೋಪಿ ನನಗೆ ವರಕ್ಷಿಣೆ ಹಣವನ್ನು ತರಲು ಯೋಗ್ಯತೆ ಇಲ್ಲದಿದ್ದ ಮೇಲೆ ಈ ಕೆಲಸವನ್ನೆಲ್ಲಾ ಬಾಯಿ ಮುಚ್ಚಿಕೊಂಡು ಮಾಡಬೇಕೆಂದು ಹೇಳಿ ನನ್ನ ಕೆನ್ನೆಗೆ ಹೊಡೆದು ಅವರು ಕುಡಿದು ಬಿಟ್ಟಿದ್ದ ಗಾಜಿನ ಲೋಟಗಳನ್ನೆಲ್ಲಾ ಒಡೆದು ಆ ಗಾಜಿನಲ್ಲಿ ನನ್ನನ್ನು ಇರಿದು ಸಾಯಿಸಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಗ ತಡೆಯಲು ಹೋದ ನನ್ನ ಎರಡೂ ಕೈಗಳಿಗೆ ಗಾಯಗಳಾಗಿರುತ್ತದೆ ಎಂದರೆ ಸರಿಯಲ್ಲ. 1ನೇ ಆರೋಪಿ ನನ್ನ ಬಟ್ಟೆಗಳನ್ನು ಆಚೆಗೆ ಬಿಸಾಡಿ ನೀನು ಮನೆಯಲ್ಲಿ ಇರಬಾರದು ಎಂದು ಹೇಳಿ ನನ್ನನ್ನು ಮತ್ತು ಚಾಸಾ-2 ಮತ್ತು 3 ರವರನ್ನು ಕುರಿತು "ಸೂಳೆ ಮಕ್ಕಳು, ಬೋಳಿ ಮಕ್ಕಳು " ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಘಟನೆ 2 ಮತ್ತು 3ನೇ ಆರೋಪಿತರ ಕಣ್ಣೆದುರು ನಡೆಯುತ್ತಿದ್ದರೂ ಸಹ ಅವರು 1ನೇ ಆರೋಪಿಗೆ ಬುದ್ದಿ ಹೇಳದೆ ಕುಮ್ಮಕ್ಕು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 2 ಮತ್ತು 3ನೇ ಆರೋಪಿತರು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿದ್ದು, ನಾನು ನನ್ನ ರೂಮಿನಲ್ಲಿ ರಕ್ತಕಲೆಯಾಗಿದ್ದ ಬಟ್ಟೆಗಳನ್ನು ಬದಲಾಯಿಸುತ್ತಿದ್ದಾಗ 2ನೇ ಆರೋಪಿ ವಿನಾ ಕಾರಣ ಕೂಗಾಡಿ ಗಲಾಟೆ ಮಾಡಿದ್ದು, ಇದರಿಂದ ನನಗೆ ಮಾನಸಿಕವಾಗಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರನೆ ದಿನ ಆರೋಪಿತರೆಲ್ಲಾ ನನ್ನನ್ನು ನನ್ನ ತಂದೆ ಮನೆಗೆ ಕರೆದುಕೊಂಡು

ಹೋಗಿ ಬಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒಂದು ವಾರದ ನಂತರ ನನ್ನ ಪತಿಯ ಸಹೋದರಿಯ ಪತಿ ಗಿರೀಶ 6ನೇ ಆರೋಪಿ ನನ್ನ ತಾಯಿಯ ಮನೆಗೆ ಬಂದು ವಿನಾ ಕಾರಣ ಗಲಾಟೆ ಮಾಡಿ ನನಗೆ ಮತ್ತು ನನ್ನ ಮನೆಯವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. 1 ವಾರದ ನಂತರ 1ನೇ ಆರೋಪಿ ನನಗೆ ದೂರವಾಣಿ ಕರೆ ಮಾಡಿ ನೀನೀಗ ಮನೆಗೆ ಬರದೆ ಇದ್ದರೆ ನಿನಗೆ ವಿಚ್ಚೇದನ ನೀಡುತ್ತೇನೆ ಎಂದು ಬೆದರಿಕೆ ಹಾಕಿ ನನ್ನನ್ನು 2ನೇ ಆರೋಪಿಯವರ ಮನೆಗೆ ಕರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2020ನೇ ಇಸವಿಯಲ್ಲಿ ಮೇ ತಿಂಗಳ ಕೊನೆ ವಾರದಲ್ಲಿ ಒಂದು ದಿನ ಸಂಜೆ 6.45 ಗಂಟೆಗೆ ಮೈಸೂರು ಜಿಲ್ಲೆಯ ಕೆ ಆರ್ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆ ಆರ್ ನಗರದಲ್ಲಿ (ಕೃಷ್ಣ ರಾಜನಗರ) ಚಾಸಾ-9 ರವರಿಗೆ ಸೇರಿದ ಚಾಸಾ -2 ಮತ್ತು ಚಾಸಾ-3 ರವರು ವಾಸವಿದ್ದ ಬಾಡಿಗೆ ಮನೆಯ ಮುಂಭಾಗದ ಪ್ಯಾಸೇಜ್ ನಲ್ಲಿ 5 ಮತ್ತು 6ನೇ ಆರೋಪಿಗಳು ಸಮಾನ ಉದ್ದೇಶದಿಂದ ಅಲ್ಲಿಗೆ ಹೋಗಿ ಜಗಳ ತೆಗೆದು ನನಗೆ, ಚಾಸಾ-2 ಮತ್ತು 3ರವರನ್ನು ಉದ್ದೇಶಿಸಿ ಇದು ಸೂಳೆ ಮನೆ, ಮಗಳಿಗೂ ಇದೇ ಬುದ್ಧಿ ಕಲಿಸಿದ್ದಾರೆ ಲೋಫರ್ ಗಳು ಬೇವರ್ಸಿ ಮುಂಡೆಯವರು ಎಂದು ಅವಾಚ್ಯ ಶಬ್ಧಗಳಿಂದ ಬೈದು ಗಲಾಟೆ ಮಾಡಿದ್ದು, ನಂತರ ಸದರಿ ದಿನದಂದು ಸಂಜೆ 7.00 ಗಂಟೆಗೆ ಕೆ ಆರ್ ನಗರ ಟೌನಿನಿಂದ ಹಾಸನ ಕಡೆಗೆ ಹೋಗುವ ಮುಖ್ಯ ರಸ್ತೆಯ ಪಕ್ಕದಲ್ಲಿರುವ ಆದಿಶಕ್ತಿ ತೋಪಮ್ಮ ದೇವಸ್ಥಾನದ ಹತ್ತಿರ ಬನ್ನಿ ಮರದ ಪಕ್ಕದಲ್ಲಿ 5 ಮತ್ತು 6ನೇ ಆರೋಪಿಗಳು ನನಗೆ ಬೇವರ್ಸಿ ಮುಂಡೆ, ಚಾಸಾ-2 ರವರಿಗೆ ನೀನು ಲೋಫರ್ ಇದ್ದೀಯಾ ಕಚ್ಚಡ ನನ್ನ ಮಗ ಸೂಳೆಗೆ ಹುಟ್ಟಿದ್ದೀಯಾ ಎಂಬಿತ್ಯಾಗಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ.

ನಂತರ 2020 ನೇ ಇಸವಿ ಜೂನ್ ತಿಂಗಳ 2ನೇ ವಾರದಲ್ಲಿ ಒಂದು ದಿನ ಸಂಜೆ 7.00 ಗಂಟೆಗೆ ಕೂಡಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ 2ನೇ ಆರೋಪಿತೆಗೆ ಸೇರಿದ ವಾಸದ ಮನೆಯಲ್ಲಿ 1ನೇ ಆರೋಪಿಯು ಇಲ್ಲದ ಸಮಯದಲ್ಲಿ 2 ರಿಂದ 6 ರವರೆಗಿನ ಆರೋಪಿಗಳು ಸಮಾನ ಉದ್ದೇಶದಿಂದ ನನ್ನ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಇಲ್ಲಿಗೆ ಯಾಕೆ ಬಂದೆ ಇದು ನಿನ್ನ ಅಪ್ಪನ ಮನೆಯಾ ಇಲ್ಲಿಂದ ದಾಟು ಬೇವರ್ಸಿ ಮುಂದೆ ಎಂದು ಹೇಳಿ ಯಾರು ಕೂಡ ನನ್ನ ಜೊತೆ ಮಾತನಾಡದೆ ಸ್ಪಂದಿಸದೆ ಇದ್ದು, ಮನೆ ಕೆಲಸಗಳನ್ನೆಲ್ಲ ಮಾಡಲು ಹೇಳಿ ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದ್ದಲ್ಲದೆ, 6ನೇ ಆರೋಪಿ ನನಗೆ ನಾವು ಕೋಟ್ಯಾಧಿಪತಿಗಳು ಆದುದರಿಂದ ನೀನು ನಮ್ಮಗಳ ವಿರುದ್ಧ ಏನೂ ಮಾತನಾಡದೆ ನಾವು ಎಷ್ಟೆ ಹಿಂಸೆ ಕೊಟ್ಟರೂ ಅದನ್ನೆಲ್ಲಾ ಸಹಿಸಿಕೊಳ್ಳಬೇಕು, ಒಂದು ವೇಳೆ ನಾವು ನಿನ್ನನ್ನು ಸಾಯಿಸಿದರೂ ನೀನು ಸಾಯಬೇಕು ಎಂದ ಹೇಳಿ ನನ್ನ ಕೈಯನ್ನು ಹಿಡಿದು ಎಳೆದಾಡಿ ಬೆನ್ನಿಗೆ, ಎಡರಟ್ಟೆಗೆ, ಕೆನ್ನೆಗೆ ಹೊಸೆದು ಸೊಂಟಕ್ಕೆ ಒದ್ದು, ಹಲ್ಲೆ ಮಾಡಿ ಲೋಫರ್ ಮುಂದೆ ಬೇವರ್ಸಿ

ಇಲ್ಲಿಂದ ಹೋಗು ಮರ್ಯಾದೆ ಇಲ್ಲ ನಿಂಗೆ ಎಂದು ಅವಾಚ್ಯ ಶಬ್ಧಗಳಿಂದದಿ ಬೈದು ನನ್ನ ಬಟ್ಟೆಗಳನ್ನೆಲ್ಲಾ ಆಚೆಗೆ ಬಿಸಾಡಿ ನನ್ನ ಮತ್ತು 1ನೇ ಆರೋಪಿಯನ್ನು ಬೇರೆ ಬೇರೆ ಇರಿಸಿ ನೀನು ವರದಕ್ಷಿಣೆ ಹಣ ತರುವವರೆಗೂ ನೀವಿಬ್ಬರೂ ಒಟ್ಟಿಗೆ ಇರಬಾರದೆಂದು ಹೇಳಿ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡಿ ವರದಕ್ಷಿಣೆ ತರುವಂತೆ ಕಿರುಕಳ ನೀಡಿ ಕೃತ್ಯ ಎಸಗಿರುತ್ತಾನೆ ಮತ್ತು ಸದರಿ ಮನೆಯಲ್ಲಿ 2021 ನೇ ಇಸವಿ ಆಗಸ್ಟ್ ತಿಂಗಳ 2ನೇ ವಾರದಲ್ಲಿ ಒಂದು ದಿನ ರಾತ್ರಿ 9.30 ಗಂಟೆ 5ನೇ ಆರೋಪಿ ನನ್ನ ಎದುರಿನಲ್ಲಿ 1ನೇ ಆರೋಪಿಗೆ ಅವಳಿಗೆ ಹೊಡೆದು ಹಿಂಸೆ ನೀಡು ಆಗ ಅವಳು ಮನೆ ಬಿಟ್ಟು ಹೋಗುತ್ತಾಳೆ ಎಂದು ಹೇಳಿ ಕುಮ್ಮಕ್ಕು ನೀಡಿದ್ದರಿಂದ 1ನೇ ಆರೋಪಿ ನನಗೆ ನೀನು ಈಗಲೂ ಸಹ ಮನೆ ಬಿಟ್ಟು ಹೋಗದೆ ಇದ್ದರೆ ಐದು ಜನರನ್ನು ಕರೆಯಿಸಿ ನಿನ್ನ ಮೇಲೆ ಅತ್ಯಾಚಾರ ಮಾಡಿಸುತ್ತೇನೆ ನಿನ್ನ ಮೈ ಮೇಲೆ ಇರುವ ಬಟ್ಟೆಯನ್ನು ತೆಗೆದು ನಿನ್ನನ್ನು ಬರಿ ಮೈಯಲ್ಲಿ ರಸ್ತೆಯಲ್ಲಿ ನಿಲ್ಲಿಸುತ್ತೇನೆ ಎಂದು ಹೇಳಿ ಮಾನಸಿಕವಾಗಿ ಹಿಂಸೆ ನೀಡಿ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ.

ದಿಃ 02.03.2023 ರಂದು ಪೊಲೀಸರು ನನ್ನ ಮತ್ತು ಚಾಸಾ–10 ಮತ್ತು 11 ರವರ ಸಮಕ್ಷಮ ನಾನು ಕೃತ್ಯ ಸ್ಥಳ ತೋರಿಸಿದ ಮೇರೆಗೆ ನಿಪಿ–2 ರಂತೆ ಸ್ಥಳ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 02.03.2023 ರಂದು ಪೊಲೀಸರು ನನ್ನ ಮತ್ತು ಚಾಸಾ–12 ಮತ್ತು 13 ರವರ ಸಮಕ್ಷಮ ನಾನು ಕೃತ್ಯ ಸ್ಥಳ ತೋರಿಸಿದ ಮೇರೆಗೆ ನಿಪಿ–3 ರಂತೆ 2ನೇ ಆರೋಪಿಯ ಮನೆಯಲ್ಲಿ ಸ್ಥಳ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 03.03.2023 ರಂದು ಪೊಲೀಸರು ನನ್ನ ಮತ್ತು ಚಾಸಾ–14 ಮತ್ತು 15 ರವರ ಸಮಕ್ಷಮ ನಾನು ಕೃತ್ಯ ಸ್ಥಳ ತೋರಿಸಿದ ಮೇರೆಗೆ ನಿಪಿ–4ರಂತೆ ನನ್ನ ತಂದೆ–ತಾಯಿಯ ಮನೆಯಲ್ಲಿ ಸ್ಥಳ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 03.03.2023 ರಂದು ಪೊಲೀಸರು ನನ್ನ ಮತ್ತು ಚಾಸಾ–14 ಮತ್ತು 15 ರವರ ಸಮಕ್ಷಮ ನಾನು ಕೃತ್ಯ ಸ್ಥಳ ತೋರಿಸಿದ ಮೇರೆಗೆ ನಿಪಿ–5 ರಂತೆ ಆದಿಶಕ್ತಿ ತೋಪಮ್ಮ ದೇವಸ್ಥಾನದ ಹತ್ತಿರ ಸ್ಥಳ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 11.04.2023 ರಂದು ಪೊಲೀಸರು ನನ್ನ ಮತ್ತು ಚಾಸಾ–6 ಮತ್ತು 7 ರವರ ಸಮಕ್ಷಮ ಕೊಡಗು ಮಹಿಳಾ ಪೊಲೀಸ್ ಠಾಣೆಯಲ್ಲಿ ನಿಪಿ–6 ರಂತೆ ಮಹಜರು ಮಾಡಿ ನಮ್ಮ ನಿಶ್ಚಿತಾರ್ಥ ಮತ್ತು ಮದುವೆ ಕಾಲದಲ್ಲಿ ತೆಗೆದ ಫೊಟೋಗಳು, ಮದುವೆಯ ಆಮಂತ್ರಣ ಪತ್ರ, ಡಿ ವಿ ಡಿ ಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 02.03.2023 ರಂದು ನಾನು ನಿನ್ನೆಯ ದಿನ ತಾರೀಖು 01.03.2023 ರಂದು ನಾನು ಠಾಣೆಗೆ ಹಾಜರಾಗಿ ----------------------------------ಅವರುಗಳು ನನಗೆ ಸಿಕ್ಕಿದ ಸಮಯಗಳಲ್ಲಿ ಅವರುಗಳ ಬಳಿ ಹೇಳಿಕೊಂಡಿರುತ್ತೇನೆ, ಅಲ್ಲದೆ ಘಟನೆ ನಡೆದ ದಿನಾಂಕಗಳು

ನನಗೆ ನೆನಪಿರುವುದಿಲ್ಲ ಎಂದು ಮೇಲೆ ಮೇಲೆ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲ ಗಳೆದ ಹೇಳಿಕೆಯ ಭಾಗವನ್ನು ನಿಪಿ–7 ಎಂದು ಗುರುತಿಸಲಾಯಿತು.

ನಿಪಿ–1 ರಿಂದ 7 ರ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಿಂದ ಏನು ಇಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.